ಇ ಸಿ ಎ ನಂ. 01/2019
ಪಿ ಡಬ್ಲ್ಯೂ: 3
ದಿನಾಂಕ 21/02/2026 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು: **3** ನೇ ಎದುರುದಾರರ ಪರ: ಶ್ರೀ ಸಿ ಒ ವೈ ವಕೀಲರಿಂದ:

ನಾನು, ಅಭಿಷೇಕ್, ಮೋಹನ, ಪ್ರಸಾದ್ ಮತ್ತು ನಾಗರಾಜು ಒಟ್ಟು 6 ಜನರನ್ನು ರೋಡ್ ಕೆಲಸಕ್ಕೆಂದು ಈರೇಶ್ ರವರು ಕರೆದುಕೊಂಡು ಹೋಗಿರುತ್ತಾರೆ. ನಾನು ಸುಮಾರು 6-7 ವರ್ಷಗಳಿಂದ ಅವರ ಬಳಿ ಕೆಲಸ ಮಾಡುತ್ತಿದ್ದೇನೆ. ನನ್ನ ಕೂಲಿಯನ್ನು ಈರೇಶ್ ರವರೇ ನೀಡುತ್ತಾರೆ ಎಂದರೆ ಸರಿ. ಆ ದಿನ ನಾನು ಹಾಗೂ ಇತರರು ಈರೇಶ್ ರವರ ಆದೇಶದ ಮೇರೆಗೆ ಕೆಲಸಕ್ಕೆ ಹೋಗಿರುತ್ತೇವೆ ಎಂದರೆ ಸರಿ. ನಮಗೆ ಎಂದಿಗೂ ಸಹ 2 ನೇ ಎದುರುದಾರರ ಸಂಬಂದ ಇರಲಿಲ್ಲ ಎಂದರೆ ಸಾಕ್ಷಿ ಹೌದು ನಮ್ಮನ್ನು ಈರೇಶ್ ರವರು ಕೆಲಸಕ್ಕೆ ಕಳುಹಿಸಿರುತ್ತಾರೆ ಎಂದು ನುಡಿಯುತ್ತಾರೆ. ನಮಗೂ 2 ನೇ ಎದುರುದಾರರಿಗೂ ಯಾವುದೇ ಕಾರ್ಮಿಕ ಮಾಲೀಕ ಸಂಬಂದ ಇಲ್ಲ ಎಂದರೆ ಸರಿ. ಆದ್ದರಿಂದ ೩ ನೇ ಎದುರುದಾರರು ಪರಿಹಾರ ನೀಡಲು ಬಾದ್ಯರಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ **1, 2** ಮತ್ತು **4**ನೇ ಎದುರುದಾರರ ಪರಃ ಶ್ರೀ ಎಂ ಎನ್ ವಕೀಲರಿಂದಃ</u>

1, 2 ಮತ್ತು 4ನೇ ಎದುರುದಾರರ ಪರ ವಕೀಲರು ಹಾಜರಿದ್ದು, 3ನೇ ಎದುರುದಾರರು ಮಾಡಿರುವ ಪಾಟೀ ಸವಾಲನ್ನೇ ಅಳವಡಿಸಿಕೊಳ್ಳುವುದಾಗಿ ನುಡಿದಿರುತ್ತಾರೆ.

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ, ಕಡೂರು.